ಸೃಜನಿ

SRUJANI: Indian Journal of Innovative Research and Development (SIJIRD)
Volume-2 Issue 5, November-December 2023, Pp. 119-124
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಜಾನಪದೀಯ ವೈದ್ಯ ಪದ್ಧತಿ ಹಾಗೂ ಗ್ರಾಮೀಣ ಬದುಕು

**ಅಸ್ಲಮ್ ಎನ್ ಮುಲ್ಲಾ**
ಕನ್ನಡ ಉಪನ್ಯಾಸಕರು, ಬಿ.ಎಲ್.ಡಿ.ಇ ಸಂಸ್ಥೆಯ ನೂತನ ಕಲಾ ಮಹಾವಿದ್ಯಾಲಯ, ತಿಕೋಟಾ.

***Abstract:***
*ಗ್ರಾಮೀಣ ಜನರ ಬದುಕಿನೊಂದಿಗೆ ಜಾನಪದೀಯ ವೈದ್ಯಕೀಯ ಪದ್ಧತಿ ಹಾಸುಹೊಕ್ಕಾಗಿದೆ. ಶತ ಶತಮಾನಗಳಿಂದ ಅಕ್ಷರದ ಗಂಧವೇ ಗೊತ್ತಿರದ ನಾಟಿ ವೈದ್ಯರು ಹಳ್ಳಿ ಹಳ್ಳಿಗಳಲ್ಲಿ ಸಿಗುತ್ತಾರೆ. ಅವರಿರುವ ಸ್ಥಳದ ಸುತ್ತಲೂ ಬೆಳೆದಿರುವ ಸಸ್ಯ ರಾಶಿಗಳನ್ನು ಔಷಧಿಗಾಗಿ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಇದರಿಂದ ಮನೆ ಎಂಬುದು ವೈದ್ಯ ಪಾಠಶಾಲೆಯಾಗಿತ್ತು. ಭಾರತೀಯ ಮೂಲದ ಹಳ್ಳಿ ವೈದ್ಯ/ನಾಟಿವೈದ್ಯ ಪದ್ಧತಿಯ ಔಷಧಿಗಳು ಕೇವಲ ರೋಗ ಪರಿಹಾರ ಮಾಡುವುದಷ್ಟೆಯಲ್ಲ ಅದರ ಜೊತೆಗೆ ದೇಹಕ್ಕೆ ಬೇಕಾದ ಪೋಷಕಾಂಶಗಳು ಮತ್ತು ಶಕ್ತಿಯನ್ನು ಒದಗಿಸುತ್ತವೆ. ಜನಪದ ವೈದ್ಯ ಎನ್ನುವುದು ಗ್ರಾಮೀಣ ಜನರ ಜೀವನದ ಅಸ್ಮಿತೆ, ಅನನ್ಯತೆ, ಭಾರತೀಯ ದೇಶಿಯ ಸಂಸ್ಕೃತಿಯ ಚಹರೆಗಳನ್ನು ಗಮನಿಸಿದಾಗ ಅಲ್ಲಿ ಗಿಡಮೂಲಿಕೆ, ಪ್ರಕೃತಿ ಚಿಕಿತ್ಸೆಗೆ ನೀಡಿರುವ ಕೊಡುಗೆ ಅಪಾರವಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದಲ್ಲಿ ಜಾನಪದ ವೈದ್ಯಕೀಯ ಪದ್ಧತಿ ಗ್ರಾಮೀಣ ಜನರ ಬದುಕಿನಲ್ಲಿ ಹೇಗೆ ಸಮ್ಮಿಳಿತಗೊಂಡಿದೆ ಎಂಬುದನ್ನು ಚರ್ಚಿಸಲಾಗಿದೆ.*

**Keywords:** *ಜಾನಪದ ವೈದ್ಯಕೀಯ ಪದ್ಧತಿ, ಜನಾಂಗೀಯ ವೈದ್ಯಕೀಯ ಪದ್ಧತಿ, ನಾಟಿ ಔಷದ, ಗ್ರಾಮೀಣ ಸಮಾಜ.*

## ಪೀಠಿಕೆ

ಜನಪದ ವೈದ್ಯರು ತಮ್ಮ ವೈದ್ಯಕೀಯ ಜ್ಞಾನವನ್ನು ಯಾವ ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲಿ ಕಲಿತಿಲ್ಲ. ಬದಲಿಗೆ ವಂಶಪಾರಂಪರಿಕವಾಗಿ ಹಿರಿಯರಿಂದ–ಕಿರಿಯರಿಗೆ ವರ್ಗಾವಣೆಗೊಂಡ ಜ್ಞಾನವಾಗಿದೆ. ಇವರು ತಮ್ಮ ಸುತ್ತಮುತ್ತ ಸಿಗುವ ಸಸ್ಯಜನ್ಯ ಮತ್ತು ಪ್ರಾಣಿಜನ್ಯ ವಸ್ತುಗಳನ್ನು ಬಳಸಿಕೊಂಡು ಅದನ್ನು ಸಂಸ್ಕರಿಸಿದ ನಂತರ ಕಷಾಯ ಅಥವಾ ಸಿದ್ಧಔಷಧಿ ಮಾಡಿ ಹಲವಾರು ರೋಗಗಳಿಗೆ ಮದ್ದನ್ನು ತಯಾರಿಸಿ ಅದನ್ನು ವಿವಿಧ ರೋಗಗಳಿಂದ ಬಳಲುತ್ತಿರುವ ರೋಗಿಗಳಿಗೆ ನೀಡಿ ಗುಣಪಡಿಸುತ್ತಾರೆ.

ಜನಪದ ವೈದ್ಯ ಪದ್ಧತಿಯನ್ನು ಮುಖ್ಯವಾಗಿ ಮಾನವವೈದ್ಯ ಮತ್ತು ಪಶುವೈದ್ಯ ಎಂದು ವಿಭಾಗಿಸಿಕೊಳ್ಳಬಹುದು. ಮಾನವ ಎಂಬುದು ಮನುಷ್ಯರಿಗೆ (ಮಕ್ಕಳು, ಸ್ತ್ರೀ–ಪುರುಷ) ಸಂಬಂಧಿಸಿದೆ. ಅಂತೆಯೇ ಪ್ರಾಣಿವೈದ್ಯ ಎಂಬುದು ದನ, ಕರು, ಜಾನುವಾರಗಳಿಗೆ ಸಂಬಂಧಿಸಿದ್ದಾಗಿದೆ. ಮಾನವನ ಜೀವನದಲ್ಲಿ ಪ್ರಾಣಿಗಳು ಗಮನಾರ್ಹವಾದ ಪಾತ್ರವನ್ನು ವಹಿಸಿವೆ. ಮನೆಯ ಕಾವಲಿಗಾಗಿ ಮೊದಲು ನಾಯಿಯನ್ನು ಸಾಕಿದ ಮಾನವ ನಂತರ ಹೈನುಗಾರಿಕೆಗೆ ಎಮ್ಮೆ, ಆಕಳು, ಮೇಕೆ, ಸಾರಿಗೆಗೆ ಕುದುರೆ, ಒಂಟೆ, ಕತ್ತೆ, ಮಾಂಸಕ್ಕಾಗಿ ಕುರಿ, ಕೋಳಿ

**Please cite this article as:** ಅಸ್ಲಮ್ ಎನ್ ಮುಲ್ಲಾ. (2023). ಜಾನಪದೀಯ ವೈದ್ಯ ಪದ್ಧತಿ ಹಾಗೂ ಗ್ರಾಮೀಣ ಬದುಕು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವಲಪ್‌ಮೆಂಟ್,* 2(5), 119–124

ಕೃಷಿ ಕೆಲಸ ಮಾಡಲು ನೆರವಾಗಲೆಂದು ಎತ್ತು, ಕೋಣಗಳನ್ನು ಸಾಕುವ ಸಂಸ್ಕೃತಿ ಬೆಳೆಯಿತು. ಈ ಪ್ರಾಣಿ ಪಕ್ಷಿಗಳಿಗೆ ಆರೋಗ್ಯದಲ್ಲಿ ಏರುಪೇರಾದಾಗ ಅವುಗಳ ಚಲನವಲನಗಳಲ್ಲಾದ ವ್ಯತ್ಯಾಸಗಳು, ರೋಗದ ಲಕ್ಷಣಗಳನ್ನು ನೋಡಿ, ಅದಕ್ಕೆ ಉಪಚಾರ ಮಾಡುತ್ತಿದ್ದರು.

**ಪಶುವೈದ್ಯ ಪದ್ಧತಿ**

ಮನುಷ್ಯನಿಗೆ ಬರುವಂತೆ ಪ್ರಾಣಿಗಳಿಗೂ ಕೂಡ ಕಾಯಿಲೆ ಬರುವುದು ಸಹಜ. ಅವುಗಳಿಗೂ ಜ್ವರ, ಕೆಮ್ಮು, ನಡಗುಂದ, ಕುಂದಕೂಕಡಿ, ಕಾಲು–ಬಾಯಿ ಬೇನೆ ರೋಗಗಳು, ಹೊಟ್ಟೆ ಉಬ್ಬುವುದು, ದಾಪಿಸುವಿಕೆ, ಮುಳು ಬಿಡುವ (ಕೀಲು ಸರಿದಿರುವ), ಕಾಲು ಮುರಿದಿರುವ, ಕೊಂಬು ಮುರಿದಿರುವ, ಭೇದಿ, ಗಾಯಗಳಾಗಿ ಹುಳು ಬಿದ್ದಿರುವ, ಮೆತ್ತಗಾಗುವುದು ಹೀಗೆ ಅನೇಕ ಸಮಸ್ಯೆಗಳು ಬರುತ್ತವೆ. ಆಗ ಅವುಗಳಿಗೆ ಗಿಡಮೂಲಿಕೆ ಔಷದ ನೀಡಿ ಗುಣಪಡಿಸಿಕೊಳ್ಳುತ್ತಾರೆ.

ಕುರಿ ಮೇಕೆಗಳಿಗೆ ಕೆಮ್ಮು ಹತ್ತಿದಾಗ ಬೆಲ್ಲ ಮತ್ತು ಚಹಾ ಪುಡಿಯ ಜೊತೆಗೆ ಸ್ವಲ್ಪ ಶುಂಠಿ ಹಾಕಿ ಕುದಿಸಿ ಕುಡಿಸಿದರೆ ಗುಣವಾಗುತ್ತದೆ. **ದನಗಳಿಗೆ ದಾಪಗುಂದ ತೆಗುವುದು** (ಆಹಾರ ಬಿಟ್ಟು ಮೆತ್ತಗಾಗಿ ನಿಲ್ಲುವುದು) ಆಗ ಅದಕ್ಕೆ ಫಿರಂಗ ಜಾಲಿ ತಪ್ಪಲವನ್ನು ಮಸಾಲೆ ಕಾರ ಮತ್ತು ಉಪ್ಪಿನೊಂದಿಗೆ ಮಿಶ್ರಣ ಮಾಡಿ ಚೆನ್ನಾಗಿ ಕುಟ್ಟಿ ಬಟ್ಟೆಯಿಂದ ಸೋಸಿ ದನಗಳ ಕಣ್ಣು, ಕಿವಿ, ಮೂಗಿನ ಹೊರಳೆಯಲ್ಲಿ ಹಾಕುವರು. ಇದರಿಂದ ಎರಡು ದಿನಗಳಲ್ಲಿ ಜಾನುವಾರುಗಳು ಚೇತರಿಸಿಕೊಳ್ಳುತ್ತವೆ. ಎತ್ತು, ಎಮ್ಮೆ, ಆಡುಗಳಿಗೆ ನಾಲಿಗೆಗೆ ಮುಳ್ಳು ಬಂದರೆ ನಾಲಿಗೆಗೆ ಉಪ್ಪಿನಕಾಯಿ ಹಚ್ಚಿ ತಿಕ್ಕುವರು, ಇಲ್ಲವೇ ಮಸಾಲೆ ಕಾರ ಮತ್ತು ಹರಳು ಉಪ್ಪು ನಾಲಿಗೆ ಮೇಲೆ ಹಾಕಿ ಉಜ್ಜುವುದರಿಂದ ಪರಿಹಾರ ಸಿಗುವುದು. ಆಡು ಮತ್ತು ಆಡಿನ ಮರಿಗಳಿಗೆ ಭೇದಿ ಹತ್ತಿದಾಗ ಬಿದಿರಿನ ತಪ್ಪಲವನ್ನು ತಿನ್ನಿಸುವರು ಇಲ್ಲವೆ ತುರಬಿ ಕಂಟೆಯನ್ನು ಸಹ ತಿನ್ನಿಸುವರು. ದನ–ಕರುಗಳ ಕಾಲು ಮುರಿದರೆ, ಅದನ್ನು ಸರಿಯಾದ ಕ್ರಮದಲ್ಲಿ ನೇರವಾಗಿ ಜಗ್ಗಿ ಬಿದಿರಿನ ಕಂಬಿಗಳನ್ನು (ಬಿದಿರನ್ನು ಸೀಳಿ ಮಾಡಿದ ತುಂಡುಗಳ) ಕಟ್ಟಿ ಬಟ್ಟೆಯನ್ನು ಸುತ್ತಿ ಸುತ್ತಲಿಯಿಂದ ಕಟ್ಟುವರು.

ಇದಲ್ಲದೆ, ಮೊಲದ ಹಿಕ್ಕಿಯನ್ನು ಚಿಕ್ಕ ಮಕ್ಕಳ ಮೂತ್ರದಲ್ಲಿ ಹಾಕಿ ಅದಕ್ಕೆ ಅರ್ಧ ನಿಂಬೆಹಣ್ಣನ್ನು ಹಿಂಡಿ ಕುಡಿಸಿದರೆ ಆಡುಗಳ ಹೊಟ್ಟೆ ನೋವು, ಹೊಟ್ಟೆ ಉಬ್ಬಿರುವುದು ಮುಂತಾದ ಸಮಸ್ಯೆಗಳಿಂದ ಪರಿಹಾರ ದೊರಕುತ್ತದೆ. ಯಾವುದೋ ಕಾರಣದಿಂದ ದನಗಳಿಗೆ ಗಾಯಗಳಾಗಿ ಅದರಲ್ಲಿ ಹುಳು ಬಿದ್ದರೆ ಬರಮ್ ಜಂಡೇ ಬೇರನ್ನು ರೊಟ್ಟಿಯೊಂದಿಗೆ ಒಂದು ಅಥವಾ ಎರಡು ಸಲ ತಿನ್ನಿಸಿ ಅದೇ ಗಿಡದ ಬೇರನ್ನು ಕೊರಳಲ್ಲಿ ಕಟ್ಟಬೇಕು. ಜನಪದರಲ್ಲಿ "ಬ್ಯಾನಿ ಒತಾಟಿ ಬರಿ ಒತಾಟಿ" ಎಂಬ ಮಾತು ಬಳಕೆಯಲ್ಲಿತ್ತು ಅಂತೆಯೇ ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆ ಎಳೆದರಂತೆ ಎಂದು ವಿಡಂಬನೆಯ ಮಾತುಗಳು ಸಾಮಾನ್ಯವಾಗಿ ಕೇಳಿಬರುತ್ತವೆ. ಈ ಮಾತಿನ ಅರ್ಥ ಏನೇ ಇದ್ದರೂ ಸಹ ಕಬ್ಬಿಣವನ್ನು ಕಾಯಿಸಿ ಬರೆ ಹಾಕುವುದು ಪಶುವೈದ್ಯದಲ್ಲಿ ಒಂದು ವಿಧಾನವಾಗಿತ್ತು. ದನಗಳ ಕುರದ ಮೇಲಿನ ಹುಬ್ಬುಗಳು ಉಬ್ಬಿದಾಗ ಅಥವಾ ನೀರು ತುಂಬಿಕೊಂಡಾಗ ಬರೆಯನ್ನಾಕಿ ಅದರ ಮೇಲೆ ಕರ್ಪೂರದ ಪುಡಿಯನ್ನು ಹಚ್ಚುತ್ತಾರೆ.

ದನಗಳು ಸರಿಯಾಗಿ ಮೇವು (ಹುಲ್ಲು) ತಿನ್ನದಿದ್ದರೆ ಅನಾನಸ್ ತಪ್ಪಲ ರಸವನ್ನು ಒಂದು ಗ್ಲಾಸ್ ಕುಡಿಸಬೇಕು. ದನಕರುಗಳಿಗೆ ಚಳಿ ಜ್ವರ ಬಂದರೂ ಮೈ ಗುಗ್ಗರಿಯೊಡೆದು ನಿಂತರೆ, ಗೊಳಗೊಳಕಿ ಬೇರು ಮತ್ತು ಬೆಲ್ಲ ಸೇರಿಸಿ ಕಷಾಯ ಮಾಡಿ ಕುಡಿಸಬೇಕು. ಗಡ್ಡಿ ಬಾವು ತೊಂದರೆ ಕಾಣಿಸಿಕೊಂಡರೆ ಅದಕ್ಕೆ ಕರಿಮದಗುಣಕಿ ತಪ್ಪಲ ಜಜ್ಜಿ ನಾಲ್ಕು–ಐದು ದಿನಗಳ ಕಾಲ ಹಚ್ಚಿದರೆ ಕಡಿಮೆಯಾಗುವುದು. ದನಗಳಿಗೆ ಹೊಟ್ಟೆ ಉಬ್ಬಿದಾಗ ಪಾದುಲಾನಿ ಉಪ್ಪನ್ನು (ಕಪ್ಪು) ನೀರಿನಲ್ಲಿ ಕರಗಿಸಿ ಒಂದೆರಡು ಸಲ ಕುಡಿಸಿದರೆ ನಿಧಾನವಾಗಿ ಕಡಿಮೆಯಾಗುತ್ತದೆ.

ದನಗಳಿಗೆ ಕುಂದ–ಕುಕಡಿ ಆದರೆ ತುಂಬೆ ಗಿಡದ ಎಲೆಗಳೊಂದಿಗೆ ಉಪ್ಪನ್ನು ಬೆರೆಸಿ ಕಲ್ಲಿನ ಮೇಲೆ ಜಜ್ಜಿ, ಬಟ್ಟೆಯಿಂದ ರಸವನ್ನು ಸೋಸಬೇಕು. ನಂತರ ನಾಲ್ಕು–ನಾಲ್ಕು ಹನಿಯಂತೆ ಕಣ್ಣು, ಕಿವಿ, ಮೂಗಿನಲ್ಲಿ ಹಾಕಬೇಕು, ಹೀಗೆ ಮಾಡಿದರೆ ಎರಡು–ಮೂರು ದಿನಗಳಲ್ಲಿ ದನಗಳಿಗೆ ಕಾಣಿಸಿಕೊಳ್ಳುವ ಮೂಗೇರಿ/ಮೂಗು ಒಣಗುವ ಕಾಯಿಲೆ ಗುಣಮುಖವಾಗುವುದು. ಎತ್ತು, ಎಮ್ಮೆ ಇನ್ನಿತರ ಸಾಕು ಪ್ರಾಣಿಗಳಿಗೆ ಉಷ್ಣತೆ ಹೆಚ್ಚಿ ಕಣ್ಣಲ್ಲಿ ನೀರು ಸೋರುತ್ತಿದ್ದರೆ ಅದಕ್ಕೆ ಕಾಮಕಸ್ತೂರಿ ಬೀಜ, ಕಲ್ಲು ಸಕ್ಕರೆ, ಮಜ್ಜಿಗೆಯೊಂದಿಗೆ ದಿನಕ್ಕೆ ಎರಡು ಸಲ ಮೂರು ದಿನಗಳ ಕಾಲ ಕುಡಿಸುವುದರಿಂದ ಗುಣಮುಖವಾಗುವುದು. ಪಶುಗಳಿಗೆ ಬಾಲ ಸಡ್ಡ ಆಗಿರುವುದರಿಂದ ಬಾಲದ ಕೂದಲುಗಳು ಉದುರುತ್ತವೆ. ಕ್ರಮೇಣ ಬಾಲ ಒಣಗುತ್ತ ಬರುತ್ತದೆ. ಹೀಗಾದಾಗ ಬಾಲದ ಮುಂದಿನ ತುದಿಯನ್ನು ಕತ್ತರಿಸಿ ಇಂಗಳಗಿಡದ ಮುಳ್ಳನ್ನು ಚುಚ್ಚಬೇಕು ಈ ಸಮಸ್ಯೆ ವಾಸಿಯಾದ ನಂತರ ಮುಳ್ಳು ತಾನಾಗೆ ಹೋಗುತ್ತದೆ.

ಪ್ರಾಣಿಗಳಿಗೆ ಗಾಯಗಳಾದರೆ ಹುಲಗರಿ ಗಿಡದ ಬೀಜವನ್ನು ತೆಗೆದುಕೊಂಡು ನುಣ್ಣಗೆ ಅರೆದು ಲೇಪಿಸಬೇಕು. ದನಗಳಿಗೆ ಏನಾದರೂ ಕಣ್ಣಿಗೆ ಪೆಟ್ಟು ತಗುಲಿ ಕಣ್ಣಿನಲ್ಲಿ ನೀರು ಸೋರುತ್ತಿದ್ದರೆ, ಕಾತರಕಿ ಕಂಟಿಯ ಎಲೆಯನ್ನು ಉಪ್ಪು ಹಾಕಿ ಅರೆದು ತಿನ್ನಬೇಕು, ತಿಂದು ಅದರ ರಸವನ್ನು ದನಗಳ ಕಣ್ಣಿನಲ್ಲಿ ಉಗುಳಬೇಕು. ಇದರಿಂದ 3–4 ದಿನಗಳಲ್ಲಿ ಕಡಿಮೆ ಆಗುತ್ತದೆ.

ಹೀಗೆ ದನಕರುಗಳಿಗೆ ರೋಗಗಳು, ಸಮಸ್ಯೆಗಳು ಬಂದರೆ ಜನಪದ ವೈದ್ಯದ ಭಾಗವಾದ ಪಶು ವೈದ್ಯದಲ್ಲಿ ಅದಕ್ಕೆ ಪರಿಹಾರವಿದೆ. ಇದನ್ನು ನಮ್ಮ ಜನಪದ ವೈದ್ಯರು ಬಹು ಹಿಂದಿನಿಂದಲೂ ಉಪಚಾರ ಮಾಡುತ್ತಾ ಬಂದಿದ್ದಾರೆ.

**ಶಿಶುವೈದ್ಯ ಮತ್ತು ಬಾಲ್ಯ ವೈದ್ಯ**

'ಶಿಶು' ಎಂದರೆ ಒಂದು ವರ್ಷದ ಒಳಗಿನ ಮಕ್ಕಳು ಹಾಗೂ ಬಾಲ್ಯ 11 ರಿಂದ 12 ವರ್ಷದ ಒಳಗಿನ ಮಕ್ಕಳು ಬರುತ್ತಾರೆ. ರೋಗಗಳಿಗೆ ವಯಸ್ಸಿನ ಭೇದವಿಲ್ಲ. ಶಿಶುಗಳಿಗೆ ಮತ್ತು ಸಣ್ಣ ಮಕ್ಕಳಿಗೆ ಯಾವುದಾದರೂ ಸಮಸ್ಯೆಗಳು ಬಂದರೆ ಅದಕ್ಕೂ ಸಹ ಜನಪದ ವೈದ್ಯರಲ್ಲಿ ಪರಿಹಾರವಿದೆ. ಕೆಲವು ಶಿಶುಗಳು ಕೇವಲ ತಾಯಿಯ ಹಾಲು ಮಾತ್ರ ಕುಡಿದು ಬೇರೆ ಆಹಾರ ಸೇವಿಸದಿದ್ದರೆ ಜನಪದ ವೈದ್ಯರು ತಾಯಿಗೆ ಔಷಧಿಯನ್ನು ಕೊಡುತ್ತಾರೆ. ಮೇಲ್ಭಾಗದಲ್ಲಿ ಹಚ್ಚುವ ಔಷಧಗಳನ್ನು ಶಿಶುಗಳಿಗೆ ನೇರವಾಗಿ ಹಚ್ಚಬಹುದು. ಒಂದು ವರ್ಷದ ಮೇಲ್ಪಟ್ಟ ಮಕ್ಕಳು ಔಷಧಿಗಳನ್ನು ಕುಡಿಯುವುದರಿಂದ ಅವರಿಗೆ ನೇರವಾಗಿ ವಯಸ್ಸಿಗೆ ತಕ್ಕಂತೆ ಪ್ರಮಾಣದ ಮೇಲೆ ಔಷಧಿಗಳನ್ನು ಕೊಡಲಾಗುತ್ತದೆ. ಶಿಶುಗಳಿಗೆ ಮತ್ತು ಮಕ್ಕಳಿಗೆ ಬರುವಂತಹ ಪ್ರಮುಖ ರೋಗಗಳು ಹಾಗೂ ಅದರ ಉಪಚಾರ ಈ ಕೆಳಗಿನಂತಿದೆ.

ನೆಗಡಿ, ಕೆಮ್ಮು, ಜ್ವರ, ಭೇದಿ, ಹೊಟ್ಟೆಯಲ್ಲಿ ಕ್ರಿಮಿ (ಜಂತು), ಶಿಶುವಿಗೆ ನಿದ್ರೆ ಬಾರದಿದ್ದರೆ, ಹೊಟ್ಟೆ ಉಬ್ಬರ, ಕಫ ಆಗಿ ಎದೆ ತುಂಬುವುದು. ವಾಂತಿ, ಹೊಟ್ಟೆ ನೋವು, ಕಾಮನೆ, ಕಿವಿ ಒಡೆದು ಸೋರುತ್ತಿದ್ದರೆ, ಮೂಗು ಒಡೆದು ರಕ್ತ ಬರುತ್ತಿದ್ದರೆ ಹೀಗೆ ಅನೇಕ ಸಮಸ್ಯೆಗಳು ಬರುತ್ತವೆ. ಇವೆಲ್ಲವುಗಳಿಗೆ ಸರಳ ರೀತಿಯಲ್ಲಿ ಜನಪದ ವೈದ್ಯರು ಚಿಕಿತ್ಸೆ ನೀಡುತ್ತಾರೆ. ಶಿಶುವಿಗೆ ಹೊಟ್ಟೆ ಉಬ್ಬರವಾಗಿ ಒದ್ದಾಡುತ್ತಿದ್ದರೆ ವೀಳ್ಯದೆಲೆಗೆ ಔಡಲ ಎಣ್ಣೆ ಹಚ್ಚಿ ಹಂಚಿನ ಮೇಲಿಟ್ಟು ಉಗುರು ಬೆಚ್ಚಗೆ ಕಾಯಿಸಿಕೊಂಡು ನಂತರ ಅದರಿಂದ ಹೊಟ್ಟೆಗೆ ಕಾವು ಕೊಡಬೇಕು.

ಎಳೆಕೂಸಿಗೆ ಕೆಮ್ಮು ನೆಗಡಿ ಕಫ ಆದಾಗ ಜೇನುತುಪ್ಪದಲ್ಲಿ ಬಟ್ಟು (ಬೆರಳು) ಎದ್ದಿ ಚೀಪಿಸಬೇಕು. ಶಿಶುಗಳು ಹಾಲು ಕುಡಿದ ನಂತರ ವಾಂತಿ ಮಾಡಿಕೊಳ್ಳುತ್ತಿದ್ದರೆ ಬಿಳಿ ಬಟ್ಟೆಯನ್ನು ಅರಿಶಿನ ನೀರಿನಲ್ಲಿ ಎದ್ದಿ ಒಂದು ಬೆಳ್ಳುಳ್ಳಿ ಮೂರರಿಂದ ನಾಲ್ಕು ಕಾಳುಮೆಣಸು ಕುಟ್ಟಿ ಆ ಬಟ್ಟೆಯಲ್ಲಿ ಹಾಕಿ ಕಟ್ಟಿ ಮೂಗಿನ ಹತ್ತಿರ ಹಿಡಿದು ಅದರ ವಾಸನೆ ಕೊಡಬೇಕು ನಂತರ ಕೈಯಲ್ಲಿ

ಕಟ್ಟಬೇಕು. ಮಕ್ಕಳಿಗೆ ಭೇದಿಯಾಗುತ್ತಿದ್ದರೆ ಅಡವಿ ಎಳ್ಳನ್ನು ತಪ್ಪಲ ನೆರಳಿನಲ್ಲಿ ಒಣಗಿಸಿ ಪುಡಿ ಮಾಡಿಕೊಂಡು ಒಂದು ಲೋಟ ಆಡಿನ ಹಾಲಿಗೆ ಒಂದು ಚಮಚ ಹಾಕಿ ಕುಡಿಸಬೇಕು ಒಂದೇ ದಿನದಲ್ಲಿ ಕಡಿಮೆಯಾಗುತ್ತದೆ.

ಚಿಕ್ಕ ಮಕ್ಕಳಿಗೆ ಕಾಮನೆಯಾದಾಗ ಅಮೃತಬಳ್ಳಿಯ ರಸವನ್ನು ಏಳು ದಿನ ಮೂರು ಚಮಚದಂತೆ ಕುಡಿಸಬೇಕು. ಬೆಳಿಗ್ಗೆ ಹಾಗೆಯೇ ಅಮೃತಬಳ್ಳಿಯನ್ನು ಸಣ್ಣ ಸಣ್ಣ ತುಂಡುಗಳನ್ನು ಕತ್ತರಿಸಿ ದಾರದಿಂದ ಕಟ್ಟಿ ಮಾಲೆಯನ್ನು ಮಾಡಿ ಕೊರಳಲ್ಲಿ ಕಟ್ಟಬೇಕು. ಹೊಟ್ಟೆಯಲ್ಲಿ ಜಂತುಹುಳು ಆಗಿ ಮೇಲಿಂದ ಮೇಲೆ ಹೊಟ್ಟೆ ನೋವು ಬರುತ್ತಿದ್ದರೆ ಒಂದು ಬಟ್ಟಲು ನೀರಿಗೆ ಒಂದು ಚಮಚ ಇಂಗು ಹಾಕಿ ಅರ್ಧ ಆಗುವ ತನಕ ಕುದಿಸಬೇಕು ನಂತರ ಸೋಸಿ ಒಂದು ಚಮಚ ತುಪ್ಪ ಹಾಕಿ ನಾಲ್ಕರಿಂದ ಐದು ದಿನಗಳ ಕಾಲ ಕುಡಿಸಬೇಕು. ಮಕ್ಕಳ ಜ್ವರಕ್ಕೆ ಹಾಲು ಕುರುಟಗಿ ತಪ್ಪಲ ಜಜ್ಜಿ ರಸ ತೆಗೆದು ಮೂರು ದಿನ ಹಾಕಬೇಕು ಕೆಮ್ಮು ಕಫ ಇದ್ದರೂ ಸಹ ಗುಣಮುಖವಾಗುತ್ತದೆ.

ಮಕ್ಕಳಿಗೆ ಗೊಬ್ಬರ ಇದ್ದರೆ ಮೈಗೆ ಕುಸುಬಿ ಎಣ್ಣೆಯನ್ನು ಹಚ್ಚಿ ಬೇವಿನ ತಪ್ಪಲ ಹಾಕಿ ನೀರು ಕಾಸಿ ಸ್ನಾನ ಮಾಡಿಸಬೇಕು. ಒಂದು ವರ್ಷದ ಎಳೆ ಕೂಸು ಹೊಟ್ಟೆ ನೋವಿನಿಂದ ಅಳುತ್ತಿದ್ದರೆ ತಾಯಿ ಅಜವಾನವನ್ನು ತಿಂದು ಮಗುವಿನ ಹೊಟ್ಟೆ ಅಂಗಾಲನ್ನು ನೆಕ್ಕಬೇಕು ಅದರ ಮುಖಕ್ಕೆ ಗಾಳಿ ಊದುವುದು. ಮಕ್ಕಳ ಕಿವಿ ಒಡೆದು ಸೋರುತ್ತಿದ್ದರೆ ಕುಸುಬಿ ಎಣ್ಣೆಯಲ್ಲಿ ಕರ್ಪೂರವನ್ನು ಹಾಕಿ ಕಾಸಿ ಆರಿದ ಮೇಲೆ ಸೋಸಿ ಎರಡು ಹನಿ ಕಿವಿಯಲ್ಲಿ ಹಾಕಬೇಕು. ಇದನ್ನು ನಾಲ್ಕು ದಿನಗಳವರೆಗೆ ಮಾಡಬೇಕು. ನಂತರ ಅಮೃತಬಳ್ಳಿಯ ಒಣಗಿದ ಕಾಂಡದ ತುಂಡುಗಳು ಹಾಗೂ ಉತ್ರಾಣಿಯ ಕಾಂಡವನ್ನು ಎಣ್ಣೆಯಲ್ಲಿ ಕುದಿಸಿ ಬಟ್ಟೆಯಿಂದ ಸೋಸಿ ಎರಡು ಹನಿ ಕಿವಿಯಲ್ಲಿ ಹಾಕಬೇಕು. ಮೂಗು ಒಡೆದು ಮೂಗಿನಿಂದ ರಕ್ತ ಸೋರುತ್ತಿದ್ದರೆ ಉತ್ರಾಣಿ ತಪ್ಪಲವನ್ನು ಜಜ್ಜಿ ರಸ ತೆಗೆದು ಎರಡು ಹನಿ ಮೂಗಿನಲ್ಲಿ ಹಾಕುವುದು. ಮಕ್ಕಳು ಮಣ್ಣು ತಿನ್ನುತ್ತಿದ್ದರೆ ಸುನಗ್ಯಾವಿಯನ್ನು ಒಡೆದು ತಿನ್ನಿಸಬೇಕು ಕ್ರಮೇಣ ಮಣ್ಣು ತಿನ್ನುವುದನ್ನು ಬಿಡುವರು. ಹೀಗೆ ವಿವಿಧ ಬಗೆಯ ಶಿಶು ಮತ್ತು ಬಾಲ್ಯದಲ್ಲಾಗುವ ರೋಗರುಜೀನುಗಳಿಗೆ ತುಂಬಾ ಪರಿಣಾಮಕಾರಿಯಾದ ಮದ್ದುಗಳನ್ನು ನಮ್ಮ ನಾಟಿವೈದ್ಯರು ನೀಡುವರು ಹಾಗೂ ಗುಣಪಡಿಸುವರು.

### ಸ್ತ್ರೀ ವೈದ್ಯ

'ಮಾಡಿ ಹಾಕೋಳು ಗಟ್ಟಿ ಇದ್ರೆ ಮನೆಯಲ್ಲ ಸದೃಢ ಇರತೈತಿ' ಎಂಬ ಮಾತು ಹಳ್ಳಿಗಳಲ್ಲಿದೆ. ಅಂದರೆ ಮನೆಯ ಆಯವ್ಯಯ ಎಲ್ಲ ಕೆಲಸಗಳನ್ನು ನೋಡಿಕೊಂಡು ಎಲ್ಲ ಸದಸ್ಯರಿಗೂ ಮೃಷ್ಟಾನ್ನ ಬೋಜನ ಮಾಡಿ ಹಾಕುವ ಹೆಣ್ಣು, ಅವಳಿಗೆ ಅನೇಕ ಸಮಸ್ಯೆಗಳು ಬರುತ್ತವೆ. ಆಕೆಯೂ ಕೂಡ ಸದೃಢವಾಗಿರಬೇಕು ಎಂದು ಸ್ತ್ರೀ ವೈದ್ಯಕ್ಕೂ ಪ್ರಾಶಸ್ತ್ಯವನ್ನು ನೀಡಲಾಗಿದೆ.

ಸ್ತ್ರೀಯರಿಗೆ ಪ್ರಮುಖವಾಗಿ ಮೈ ಮೇಲೆ ಹೋಗುವುದು (ಕೆಂಪು ಮತ್ತು ಶ್ವೇತ ಪದರಗಳು), ಮುಟ್ಟಿನ ಸಮಸ್ಯೆಗಳು, ಗರ್ಭಪಾತ (ಹೊಟ್ಟೆ ಬೀಳುವ), ವಾಂತಿ, ಸ್ತನ ರೋಗಗಳು, ಎದೆ ಹಾಲಿನ ಕೊರತೆ, ಮುಟ್ಟಾದಾಗ ಅತಿಯಾದ ಹೊಟ್ಟೆ ನೋವು, ಗರ್ಭಕೋಶದ ಬಾವು, ಮುಟ್ಟು ತಡೆದಿದ್ದರೆ/ವಯಸ್ಸಿಗೆ ಬಂದರೂ ಋತುಮತಿಯಾಗ ದಿರುವುದು ಇನ್ನೂ ಅನೇಕ ಆರೋಗ್ಯ ಸಮಸ್ಯೆಗಳು ಮಹಿಳೆಯರನ್ನು ಕಾಡುತ್ತವೆ. ಇಂತಹ ಅನೇಕ ಕಾಯಿಲೆಗಳಿಗೆ ಜನಪದ ವೈದ್ಯರು ಚಿಕಿತ್ಸೆ ನೀಡುತ್ತಾರೆ.

ಮೈ ಮೇಲೆ ಕೆಂಪು ಪದರು ಹೋಗುತ್ತಿದ್ದರೆ ಹಂಚಿ ಬಟ್ಟೆನ ತಪ್ಪಲ, ಗುಂಡಹುಸಲಕ್ಕೆ ತಪ್ಪಲ, ಅಲೋರ್‍ಯಾನ ಗಿಡ, ಈ ಎಲ್ಲ ಗಿಡಗಳ ತಪ್ಪಲವನ್ನು ಸಮ ಪ್ರಮಾಣದಲ್ಲಿ ಸೇರಿಸಿ ಜಜ್ಜಿ ರಸ ಮಾಡಿ ಏಳು

ದಿನಗಳ ಕಾಲ ಒಂದೊಂದು ಬಟ್ಟಲನ್ನು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಕುಡಿಯಬೇಕು. ಮುಟ್ಟಿನ ಸಂದರ್ಭದಲ್ಲಿ ಹೆಚ್ಚಿಗೆ ರಕ್ತ ಹೋಗುತ್ತಿದ್ದರೆ ದಿನಕ್ಕೆ ಮೂರು ಹೊತ್ತು ನಿಂಬೆ ರಸ ಕುಡಿಯಬೇಕು. ಬಸುರಿ ಹೆಂಗಸರಿಗೆ ಹೆಚ್ಚು ವಾಂತಿ ಆಗುತ್ತಿದ್ದರೆ ಹಳೆಯ ಅಕ್ಕಿ ನುಚ್ಚನ್ನು ನೀರಿನಲ್ಲಿ ನೆನೆಸಿ ನಂತರ ಅದನ್ನು ಅದೇ ನೀರಿನಲ್ಲಿ ಚೆನ್ನಾಗಿ ಕಿವುಚಿ ಆ ನೀರನ್ನು ಬಸೆದು ತೆಗೆದ ನೀರಿನಲ್ಲಿ ಒಂದು ಚಮಚ ಹವೆಜ್ ಪುಡಿ ಒಂದು ಚಮಚ ಕಲ್ಲು ಸಕ್ಕರೆ ಪುಡಿ ಹಾಹಿ ಕುಡಿಸಿದರೆ ಗುಣಮುಖರಾಗುತ್ತಾರೆ. ಬಾಣಂತನದ (ಹೆರಿಗೆಯ) ನಂತರ ಹೆಣ್ಣು ಮಕ್ಕಳಿಗೆ ಹುರುಳಿ ಕಟ್ಟನ್ನು ಕುಡಿಸಬೇಕು ಇದರಿಂದ ಗರ್ಭಾಶಯದ ನೋವು ಕಡಿಮೆಯಾಗುತ್ತದೆ.

ಮುಟ್ಟು ಆಗುವಾಗ ಅತಿಯಾಗಿ ಹೊಟ್ಟೆ ನೋವು ಕಾಡುತ್ತಿದ್ದರೆ, ಕರಿಎಳ್ಳನ್ನು ಕುಟ್ಟಿ ಪುಡಿ ಮಾಡಿ ಬಿಸಿ ನೀರಿನಲ್ಲಿ ಕಲಸಿ ಕುಡಿಯಬೇಕು. ಎದೆ ಹಾಲು ಹೆಚ್ಚಲು ಸಬ್ಬಸ್ಸಿಗೆ ಪಲ್ಯ ಹೆಚ್ಚಿಗೆ ತಿನ್ನಬೇಕು. ಮೇಲಿಂದ ಮೇಲೆ ಹೊಟ್ಟೆ ಬೀಳುತ್ತಿದ್ದರೆ ದಿನಾಲು ಬೆಳಿಗ್ಗೆ ಮತ್ತು ಸಂಜೆ ಒಂದು ಚಮಚ ಜವೀ ಗೋದಿ ಹಿಟ್ಟು ಮತ್ತು ಒಂದು ಚಮಚ ಕಲ್ಲುಸಕ್ಕರೆ ಪುಡಿಯನ್ನು ಒಂದು ಲೋಟ ನೀರಿನಲ್ಲಿ ಹಾಕಿ ಕುಡಿಯಬೇಕು ಮತ್ತು ಹಂದಿ ಗಿಡದ ಬೇರನ್ನು ಎರಡು ಅಂಗುಲ ಆಗುವಷ್ಟು ಸೊಂಟದಲ್ಲಿ ಕಟ್ಟಬೇಕು. ಬಾಣೆತನ ಬ್ಯಾನಿ ಎದ್ದಾಗ ಬಿಚ್ಚಿ ತೆಗಿಯಬೇಕು (9 ತಿಂಗಳ ನಂತರ).

ಮಾಸಿಕ ನಿಂತು ಹೋದರೆ ಒಂದು ಬಟ್ಟಲು ಬಿಸಿ ಹಾಲಿನಲ್ಲಿ ಒಂದು ಚಮಚ ಅಜವಾನ ಪುಡಿಯನ್ನು ಹಾಕಿ ಕಲಸಿ ಕುಡಿಯಬೇಕು. 18 ವಯಸ್ಸಿಗೆ ಬಂದರೂ ಮೈ ನೆರೆಯದಿದ್ದರೆ ಒಂದು ಹಿಡಿಯಷ್ಟು ಎಳ್ಳು ಅದರ ಜೊತೆ ಒಂದು ನಿಂಬೆ ಗಾತ್ರದಷ್ಟು ಬೆಲ್ಲ ಎರಡನ್ನು ಕೂಡಿಸಿ ತಿನ್ನಬೇಕು. ಇಲ್ಲವಾದರೆ ಕಷಾಯ ಮಾಡಿ ಕುಡಿಯಬೇಕು (ಒಂದು ತಿಂಗಳವರೆಗೆ). ಅಂತೆಯೇ ತೆಂಗಿನ ಮರದ ಬೆರಳು ಒಣಗಿಸಿ ಪುಡಿ ಮಾಡಬೇಕು ಒಂದು ಬಟ್ಟಲು ಬಿಸಿ ಆಕಳ ಹಾಲಿನಲ್ಲಿ ನಾಲ್ಕು ಚಮಚದಷ್ಟು ಹಾಕಿ ಕುಡಿಯಬೇಕು ದಿನಕ್ಕೆ ಎರಡು ಸಲ ಒಂದು ತಿಂಗಳವರೆಗೆ ಮಾಡಬೇಕು. ಹಣ್ಣಾದ ಹಾಗಲಕಾಯಿಯಲ್ಲಿನ ಬೀಜಗಳನ್ನು ತೆಗೆಯಬೇಕು ಅದರಲ್ಲಿ ಬೆಲ್ಲವನ್ನು ಹಾಕಿ ಕೆಂಡದ ಮೇಲೆ ಇಟ್ಟು ಬೂದಿ ಮುಚ್ಚಿ ಚೆನ್ನಾಗಿ ಕಾಯಿಸಬೇಕು. ನಂತರ ನೇರವಾಗಿ ಅದನ್ನು ಒಂದು ವಾರಗಳ ಕಾಲ ತಿನ್ನಬೇಕು. ಹೀಗೆ ಹಲವಾರು ಸ್ತ್ರೀರೋಗಗಳಿಗೆ ಜನಪದ ವೈದ್ಯರು ಚಿಕಿತ್ಸೆ ನೀಡುತ್ತಾರೆ.

**ವಿಷ ವೈದ್ಯ ಪದ್ಧತಿ**

ಜನಪದ ವೈದ್ಯದಲ್ಲಿ ವಿಷ ವೈದ್ಯ ಎಂಬುದು ಕೂಡ ಒಂದು ಭಾಗವಾಗಿದೆ. ಕ್ರಿಮಿ–ಕೀಟಗಳು ಅಥವಾ ವಿಷ ಜಂತುಗಳು ಕಡಿದು ನಂಜು (ವಿಷ) ಏರುತ್ತದೆ. ಕೆಲವೊಬ್ಬರು ಮೋಸದಿಂದ ತಿನ್ನುವ ವಸ್ತುಗಳಲ್ಲಿ ವಿಷಕಾರಿ ಪದಾರ್ಥವನ್ನು ಬಳಸುತ್ತಾರೆ. ಗಿಡಮೂಲಿಕೆ ಔಷಧ ಪದ್ಧತಿಯಲ್ಲಿ ಇವುಗಳಿಗೂ ಸಹ ಪರಿಹಾರವಿದೆ. ವಿಷ ವೈದ್ಯವನ್ನು ಎರಡು ಪ್ರಕಾರಗಳಾಗಿ ಮಾಡಿಕೊಂಡು, ಅದಕ್ಕೆ ತಕ್ಕಂತೆ ಕೆಲ ಪರಿಹಾರಗಳನ್ನು ಜನಪದ ವೈದ್ಯರು ನೀಡುತ್ತಾರೆ.

ಚೇಳು ಕಡಿದವರಿಗೆ ಚೇಳು ಕಡಿದ ಜಾಗಕ್ಕೆ ಗಜಗದ ಬೇರನ್ನು ಅರೆದು ಲೇಪಿಸಬೇಕು. ಗೋಳಗೊಳಕಿ ಗಿಡದ ಚಿಗುರು ಎಲೆಗಳನ್ನು ತಂದು ಅದರಲ್ಲಿ ಉಪ್ಪು ಬೆರೆಸಿ ಚೆನ್ನಾಗಿ ಕಲ್ಲಿನ ಮೇಲೆ ಜಜ್ಜಬೇಕು, ಚೇಳು ಕಡಿದಿರುವ ವಿರುದ್ಧ ಭಾಗದ ಕಿವಿಯಲ್ಲಿ ಎರಡರಿಂದ ಮೂರು ಹನಿ ಹಿಂಡಬೇಕು. ಹುಚ್ಚು ನಾಯಿ ಕಡಿದಾಗ ಏರಿದ ವಿಷವನ್ನು ಇಳಿಸಲು ಏಳು ದಿನಗಳ ಕಾಲ ಪಿರಂಗ ಜಾಲಿ ತಪ್ಪಲ ರಸವನ್ನು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಒಂದು ಬಟ್ಟಲು ಆಗುವಷ್ಟು ಕುಡಿಯಬೇಕು. ಝರಿ ಕಡಿದಾಗ ಹತ್ತರಕಿಯ ಹಾಲನ್ನು ಹಚ್ಚಿದರೆ ವಿಷದ ಪ್ರಮಾಣ ಕಡಿಮೆಯಾಗಿ ಉರಿ ಶಮನವಾಗುವುದು. ಖರ್ಜೂಟಕಿ ಹುಳು ಕಡಿದಾಗ ಕಡಿದ ಜಾಗಕ್ಕೆ ಕಬ್ಬಿಣದ ವಸ್ತುವಿನಿಂದ ಉಜ್ಜಬೇಕು. ಜೇನು ಹುಳು ಕಡಿದಾಗ ನಿಂಬೆಹಣ್ಣಿನ ಹೋಳು ಹಚ್ಚಿ 15

ನಿಮಿಷಗಳ ಕಾಲ ಹಿಡಿಯಬೇಕು. ಹಾವು ಕಡಿದಾಗ ಔಡಲ ಹರಳಲೆಯನ್ನು 10 ಕರಿಮೆಣಸು ಕಾಳುಗಳೊಂದಿಗೆ ಜಜ್ಜಿ ರಸ ತೆಗೆದು ಹಾವು ಕಡಿದಿರುವ ರೋಗಿಗೆ ಕುಡಿಸಬೇಕು ವಾಂತಿ ಆಗಿ ವಿಷದ ಪ್ರಮಾಣ ಕಡಿಮೆಯಾಗುವುದು. ಇಲಿ ಕಡಿದು ನಂಜಾದಾಗ ತುಳಸಿ ರಸಕ್ಕೆ ಅದಕ್ಕೆ ಸಮ ಪ್ರಮಾಣದಲ್ಲಿ ಜೇನುತುಪ್ಪ ಹಿಪ್ಪಲಿ ಪುಡಿ ಬೆರೆಸಿ ಪ್ರತಿದಿನ ನುಂಗಿದರೆ ವಿಷದ ಬಾಧೆ ಕಡಿಮೆಯಾಗುತ್ತದೆ.

ಹೀಗೆ ಪ್ರಾಣಿಗಳ ಕಡಿತ ಅಥವಾ ಅನ್ನದಲ್ಲಿ ವಿಷದ ಪ್ರಮಾಣ ಹೋಗಿದ್ದರೆ ಸಾಸಿವೆ ಕಾಳನ್ನು ಅರೆದು ಉಗುರು ಬೆಚ್ಚಗೆ ನೀರಿನಲ್ಲಿ ಹಾಕಿ ಕುಡಿದರೆ ವಾಂತಿಯಾಗಿ ವಿಷದ ಪ್ರಮಾಣ ಕಡಿಮೆಯಾಗುವುದು. ವಿಷವನ್ನು ಸೇವಿಸಿದ ವ್ಯಕ್ತಿಗೆ ಅಪಾರ ಪ್ರಮಾಣದ ಬೇವಿನ ಎಲೆಯ ರಸವನ್ನು ಜಜ್ಜಿಬೇರನ್ನು ಕುಟ್ಟಿ ಪುಡಿ ಮಾಡಿ ಸ್ವಲ್ಪ ಬೆರೆಸಿ ಕುಡಿಸಬೇಕು ವಾಂತಿಯಾಗುವ ಮೂಲಕ ವಿಷದ ಅಂಶ ಹೊರಬರುವುದು. ವಿಷವನ್ನು ಕುಡಿದವರಿಗೆ ವಾಂತಿ ಮಾಡಿಸಲು ಹುಣಸೆ ಹಣ್ಣನ್ನು ಕಿವುಚಿ ಅದರಲ್ಲಿ ತೆವಿ (ಹಂಚಿನ) ಮಸಿಯನ್ನು ಬೆರೆಸಿ ಕೊಡಿಸಬೇಕು. ಹೀಗೆ ಅನೇಕ ಸಂದರ್ಭದಲ್ಲಿ ಜಾನಪದ ವೈದ್ಯರು ವಿವಿಧ ಸಮಸ್ಯೆಗಳನ್ನು ನಿವಾರಿಸುತ್ತಾರೆ.

**ವಯಸ್ಕ ವೈದ್ಯ ಪದ್ಧತಿ**

ಹದಿಹರೆಯದ ವಯಸ್ಸಿನಲ್ಲಿ ಕೆಲವೊಂದು ಸಮಸ್ಯೆಗಳು ವಿಪರೀತವಾಗಿ ಕಾಡುತ್ತವೆ. ಈ ಬಗೆಯ ಸಮಸ್ಯೆಗಳನ್ನು ಮನೆ ಮದ್ದು ಬಳಸಿ ನಾಟಿವೈದ್ಯರು ಪರಿಹರಿಸುವರು. ಈ ಸಮಸ್ಯೆಗಳು ಯುವಕ ಯುವತಿಯರಿಗೆ ಬೇತಾಳನಂತೆ ಬೆನ್ನತ್ತಿ ಕಾಡುತ್ತಿವೆ. ಅವುಗಳಲ್ಲಿ ಮುಖದ ಮೇಲಿನ ಮೊಡವೆಗಳು, ಮುಖದ ಮೇಲೆ ಕಲೆಗಳು, ಕೂದಲು ಉದುರುವುದು, ನಿದ್ರಾಹೀನತೆ, ತೂಕ ಇಳಿಯುವುದು ಈ ರೀತಿಯ ಅನೇಕ ಸಮಸ್ಯೆಗಳು ಬರುತ್ತವೆ. ಮುಖದ ಮೇಲೆ ಮೊಡವೆಗಳಾದರೆ ಪುದಿನ ತಪ್ಪಲ್ಲವನ್ನು ಅರೆದು ಮುಖಕ್ಕೆ ಲೇಪಿಸಬೇಕು ಅರ್ಧ ತಾಸಿನ ನಂತರ ಮುಖ ತೊಳೆದುಕೊಳ್ಳಬೇಕು. ವಯಸ್ಕರಲ್ಲಿ ಕಾಡುವ ನಿದ್ರಾಹೀನತೆಗೆ ಒಂದು ಲೋಟ ಬಿಸಿ ಹಾಲಿಗೆ ಒಂದು ಚಮಚ ಬದಾಮ ಪೌಡರ್ ಹಾಗೂ ಒಂದು ಚಮಚ ಕಲ್ಲು ಸಕ್ಕರೆ ಪುಡಿ ಹಾಕಿ ರಾತ್ರಿ ಮಲಗುವಾಗ ಕುಡಿಯಬೇಕು. ಮುಖದ ಮೇಲೆ ಕಲೆಗಳಾಗಿದ್ದರೆ ಸೌತೆಕಾಯಿ ಮತ್ತು ನಿಂಬೆಹಣ್ಣಿನ ಸಿಪ್ಪೆಯನ್ನು ಅರೆದು ಹಚ್ಚುವುದರಿಂದ ಕಲೆಗಳು ಹೋಗುತ್ತವೆ ಹಾಗೂ ತ್ವಚೆ ಕಾಂತಿಯುತವಾಗುವುದು.

ಒಟ್ಟಾರೆಯಾಗಿ ಈ ಎಲ್ಲ ಅಂಶಗಳನ್ನು ಅವಲೋಕಿಸಿದಾಗ ವೈದ್ಯಕಿಯ ಪದ್ಧತಿಯಲ್ಲಿ ಎಷ್ಟೇ ಆಧುನಿಕತೆ ಬಂದರೂ ಭಾರತದ ಗ್ರಾಮಿಣ ಪ್ರದೇಶಗಳಲ್ಲಿ ಇನ್ನು ಜನಪದ ವೈದ್ಯ ಪದ್ಧತಿಯು ಜಿವಂತವಾಗಿದ್ದು, ನಮ್ಮ ಪೂರ್ವಿಕರಿಂದ ಬಳುವಳಿಯಾಗಿ ಬಂದ ಈ ಪದ್ಧತಿಯನ್ನು ಮುಂದಿನ ಪೀಳಿಗೆಗೆ ಉಳಿಸಿ ಬೆಳೆಸುವುದು ಅಗತ್ಯವಾಗಿದೆ.

**ಪರಾಮರ್ಶನ ಗ್ರಂಥಗಳು**


- ಅಂಬಳಿಕೆ ಹಿರಿಯಣ್ಣ. (1994). *ಜನಪದ ಕೆಲವು ಅಧ್ಯಯನಗಳು.* ಕರ್ನಾಟಕ ಜನಪದ ಮತ್ತು ಯಕ್ಷಗಾನ ಅಕಾಡೆಮಿ.
- ದೇಜಗೌ. (1986). *ಜನಪದ ವಾಹಿನಿ.* ಡಿ.ವಿ.ಕೆ.ಮೂರ್ತಿ.
- ಗುರುಮೂರ್ತಿ ಕೆ.ಜಿ. (1979). ಜನಪದ ಸಮಾಜ ಮತ್ತು ಸಂಸ್ಕೃತಿ. ಕರ್ನಾಟಕ ವಿಶ್ವವಿದ್ಯಾಲಯ.
- ನಾಟಿ ವೈದ್ಯರ ಸಂದರ್ಶನ. ಕನಮಡಿ ಗ್ರಾಮ, ವಿಜಯಪುರ ಜಿಲ್ಲೆ